<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು.</u>

**<u>ಸೆಷನ್ಸ್ ಕೇಸ್ ನಂಬ್ರ 19/2025</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುನೀತಾ | <u>ಪ್ರಾಸಾಃ 2</u> |
| ಗಂಡನ ಹೆಸರು | : | ರಾಘವೇಂದ್ರ | <u>ಚಾಸಾಃ 2</u> |
| ಪ್ರಾಯ | : | 32 ವರ್ಷ | **<u>ದಿನಾಂಕಃ 18.12.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಎಳಚಿತಾಯನಗರ, ಉಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು. | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ನನ್ನ ಗಂಡ, ಚಾಸಾ-3 ನನ್ನ ತಾಯಿ, ಚಾಸಾ-4 ನನ್ನ ನೆರೆಕರೆಯವರು, ಚಾಸಾ-5 ನನ್ನ ಮೈದುನ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂದೆಯ ತಮ್ಮ. ಸುಮಾರು 2 ವರ್ಷಗಳ ಹಿಂದೆ ನಾನು, ನನ್ನ ಗಂಡ ಸಜಿಪದಲ್ಲಿ ತೋಟದ ಕೆಲಸಕ್ಕೆ ಹೋಗಿ, ಮಾಲೀಕರ ಮನೆಯಲ್ಲಿ ವಾಸವಾಗಿದ್ದೆವು.

2. ದಿನಾಂಕ 15.11.2024 ರಂದು ನಾವು ಕೊಯ್ಯೂರು ಕ್ರಾಸ್ ನಲ್ಲಿರುವ ನನ್ನ ತಾಯಿಯ ಮನೆಗೆ ಬಂದಿದ್ದೆವು. ಆರೋಪಿಯು ನನ್ನ ತಾಯಿಯ ಮನೆಯಲ್ಲಿ ವಾಸವಾಗಿರುತ್ತಾರೆ. ದಿನಾಂಕ 18.11.2024 ರಂದು ರಾತ್ರಿ 8.30 ಗಂಟೆಗೆ ನಾನು ಸ್ನಾನಕ್ಕೆ ಹೋಗಿದ್ದು ಬಾತ್ ರೂಂಗೆ ಚಿಲಕ ಇಲ್ಲದೇ ಇರುವುದರಿಂದ ಆ ಕಡೆ ಸ್ವಲ್ಪ ಗಮನ ನೀಡುವಂತೆ ನನ್ನ ಗಂಡನ ಬಳಿ ತಿಳಿಸಿ ಹೋಗಿರುತ್ತೇನೆ. ಸ್ವಲ್ಪ ಹೊತ್ತಿನಲ್ಲಿ ಆರೋಪಿ ಮದ್ಯಪಾನ ಸೇವಿಸಿದ ಮತ್ತಿನಲ್ಲಿ ಬಾತ್ ರೂಂ ಪಕ್ಕದಲ್ಲಿರುವ ಟ್ಯಾಲೆಟ್ ರೂಂಗೆ ಹೋಗಲು ನಿಂತಿದ್ದರು. ನಾನು ಗಂಡನ ಬಳಿ

ಆರೋಪಿಯನ್ನು ಕರೆದುಕೊಂಡು ಹೋಗಲು ಹೇಳಿರುತ್ತೇನೆ. ನಂತರ ನನ್ನ ಗಂಡ ಮತ್ತು ಆರೋಪಿಯ ನಡುವೆ ಮಾತುಕತೆಯಾಯಿತು. ನಂತರ ಸ್ನಾನ ಮಾಡಿ ಬಂದಿರುತ್ತೇನೆ. ಆಗ ನನ್ನ ಗಂಡ ಮತ್ತು ಮಗು ಸಿಟ್ ಔಟ್ ನಲ್ಲಿ ಮಲಗಿದ್ದರು. ನಾನು ಅಡುಗೆ ಮನೆಯಲ್ಲಿ ಅನ್ನ ತಯಾರಿಸಿ ನಂತರ ನಾನು ನನ್ನ ಗಂಡ ಮತ್ತು ಮಗುವನ್ನು ಊಟಕ್ಕೆ ಕರೆಯಲು ಸಿಟ್ ಔಟ್ ಕಡೆಗೆ ಬರುವಾಗ, ಆರೋಪಿಯು ನನ್ನ ಗಂಡನ ಮುಖ, ಎಡಕಿವಿ ಮತ್ತು ಹೊಟ್ಟೆಯ ಭಾಗಕ್ಕೆ ನೀರಿನ ತರಹದ ದ್ರುವವನ್ನು ಚೆಲ್ಲಿರುತ್ತಾರೆ. ನಂತರದಲ್ಲಿ ದ್ರುವ ಬಿದ್ದ ಜಾಗದಿಂದ ಹೊಗೆ ಬರುತ್ತಿದ್ದು ನನ್ನ ಗಂಡ ನೋವಿನಿಂದ ಒದ್ದಾಡುತ್ತಿದ್ದು ಕಿರುಚುತ್ತಿದ್ದರು. ನಾನು ನೀರು ತಂದು ಹಾಕಿದೆ, ಆಗ ಅವರು ಉರುಳಾಟವಾಡಿದ್ದು, ನಾನು ಒಂದು ಕಾರಿನಲ್ಲಿ ಬೆಳ್ತಂಗಡಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ವೈದ್ಯರು ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದು ಅದರಂತೆ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಕರೆತಂದು ದಾಖಲು ಮಾಡಿರುತ್ತೇನೆ.

3. ಆರೋಪಿ, ಚಾಸಾ-1 ರವರಿಗೆ ಬೈದಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ್ಯಸಿಡ್ ಎರಚಿದ ಸಮಯದಲ್ಲಿ ನನ್ನ ಗಂಡ ಯಾವ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ. ಸದರಿ ಬಟ್ಟೆಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ಬಾಟಲಿಯನ್ನು ಗುರುತಿಸಲು ಆಗುವುದಿಲ್ಲ. ಈ ಘಟನೆಯ ಬಗ್ಗೆ ಬೆಳ್ತಂಗಡಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಹೇಳಿಕೆಯನ್ನು **ನಿಪಿ-6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿ ನನ್ನ ಚಿಕ್ಕಪ್ಪ ಕುಡಿದಿರುತ್ತಾರೆ ಎಂದು ನಾನು ಪ್ರಥಮ ಬಾರಿಗೆ ಹೇಳಿರುತ್ತೇನೆ. ಪೋಲಿಸರ ಮುಂದೆ ನಾನು ಹೇಳಿಕೆ

ನೀಡಿರುವುದಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

4. ನನ್ನ ತಾಯಿಯ ಮನೆಯ ಬಾತ್ ರೂಂಗೆ ಚಿಲಕ ಇಲ್ಲದೇ ಇರುವುದು ತಿಳಿದಿದ್ದು, ನಾನು ಸ್ನಾನ ಮಾಡುವುದನ್ನು ನೋಡಲು ಆರೋಪಿ ಬಂದಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡ ಬಂದು ಆರೋಪಿಯನ್ನು ಕುರಿತು, ಬಾತ್ ರೂಂಗೆ ಚಿಲಕ ಇಲ್ಲದೇ ಇದ್ದರೂ ಕೂಡ ನೀವು ಯಾಕೆ ಬಾತ್ ರೂಂ ಬಳಿ ಹೋಗಿರುತ್ತೀರಿ ಎಂದು ಹೇಳಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಇದರಿಂದ ಕೋಪಗೊಂಡ ಆರೋಪಿ ನನ್ನ ಗಂಡನನ್ನು ಕುರಿತು ರಂಡೇ ಮಗ ಬೇವರ್ಸಿ ನಡಿ ಇಲ್ಲಿಂದ ಎಂದು ಬೈದು, ಜಗಳಕ್ಕೆ ಇಳಿದಿರುತ್ತಾನೆಂದರೆ ಸರಿಯಲ್ಲ.

5. ಆರೋಪಿ ನನ್ನ ಗಂಡನಿಗೆ ಆ್ಯಸಿಡ್ ಎರಚಿರುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-6 ರ ಹೇಳಿಕೆಯನ್ನು ನನ್ನ ಸ್ವಇಚ್ಛೆಯಿಂದ ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ಆರೋಪಿ ನಾನು ಸ್ನಾನ ಮಾಡುತ್ತಿದ್ದಾಗ ಸ್ನಾನದ ಮನೆಯೊಳಗೆ ಬಂದಿರುತ್ತಾರೆ , ಬಂದವರು ಹೋಗಿ ಎಂದರೂ ಸಹ ಹೋಗಿರುವುದಿಲ್ಲ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ನನ್ನ ಹೇಳಿಕೆಯ ಸಮಯದಲ್ಲಿ ಹೇಳಿರುವುದಿಲ್ಲ. ನಾನು ದಿನಾಂಕ 20.12.2024 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ " ಬಾತ್ ರೂಂ ಗೆ ಚಿಲಕ ಇಲ್ಲದೇ ಇರುವುದರಿಂದ ........................................................................................ ................................ ತಡೆಯಲಾರದೆ ನಾನು ನೀರನ್ನು ಹಾಕಿರುತ್ತೇನೆ " ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಸದರಿ ಹೇಳಿಕೆಯ ಭಾಗವನ್ನು **ನಿಪಿ-7** ಎಂದು ಗುರುತಿಸಲಾಯಿತು.

6. ನಾವು ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ ಮತ್ತು ಆ ಕಾರಣಕ್ಕಾಗಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಡಿ.ಎಸ್ ವಕೀಲರಿಂದ**

7. ನನ್ನ ಗಂಡನ ಮೇಲೆ ಆರೋಪಿ ನೀರಿನ ದ್ರವವನ್ನು ಚೆಲ್ಲಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾನು ಬೆಳ್ತಂಗಡಿಯ ನ್ಯಾಯಾಧೀಶರ ಮುಂದೆ ಏನು ಹೇಳಿಕೆ ನೀಡಿರುತ್ತೇನೆ ಎಂದು ನನಗೆ ತಿಳಿದಿಲ್ಲ, ಆ ಸಮಯದಲ್ಲಿ ನಾನು Tension ನಲ್ಲಿ ಇದ್ದೆ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.